**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ**

**ಸಿ.ಸಿ.ನಂ.55/2019**

ಸಾಕ್ಷಿಯ ಹೆಸರು ಲಕ್ಷ್ಮೀ ರೈ ಸಿಡಬ್ಲ್ಯೂ-01

ತಂದೆಯ ಹೆಸರು ಕೋಂ ಪುಷ್ಪಧರ ರೈ ಪಿಡಬ್ಲ್ಯೂ-02

ವಯಸ್ಸು 65 ವರ್ಷ

ಉದ್ಯೋಗ ಮನೆಕೆಲಸ

ವಾಸ ಸ್ಥಳ ಮಂಗಳೂರು

ದಿನಾಂಕಃ **06-12-2021** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ-

ಆರೋಪಿತರ ಪರಿಚಯ ಇದೆ. ಮಗ ಹಾಗೂ ಮಗಳ ಪರಿಚಯ ಇದೆ. ಅಲ್ಲದೇ ಅವರ ಸಂಬಂಧಿಕರ ಶ್ಯಾಂ ಎಂಬುವವರ ಪರಿಚಯ ಇದೆ. ನಾನು 1995 ರಿಂದ 2015 ರವರೆಗೂ ತರೀಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡಿದ್ದೇನೆ. ಮೊದಲು ಆರೋಪಿ ಒಂದು ರಕ್ತ ಪರೀಕ್ಷಾ ಕೇಂದ್ರ ನಡೆಸುತ್ತಿದ್ದರು. ಆ ಕಾರಣ ನನಗೆ ಪರಿಚಯ ಇದ್ದರು. ಆರೋಪಿ ನನ್ನ ಬಳಿ ಬಂದು ಒಂದು ಚೀಟಿ ನಡೆಸುತ್ತೇನೆ. ಮಗಳ ಮದುವೆ ಹಾಗೂ ಮಗನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆಂದು ಚೀಟಿ ಹಾಕಿಸಿರುತ್ತಾರೆ. ಆರೋಪಿ ಬೆಲೇನಹಳ್ಳಿಯಲ್ಲಿರುವ ಅವರ ಮನೆಯಲ್ಲಿ ಚೀಟಿ ನಡೆಸುತ್ತಿದ್ದರು. ನಾನು 2011 ರಲ್ಲಿ 5 ಚೀಟಿಗಳನ್ನು ಹಾಕಿರುತ್ತೇನೆ. 50 ಸಾವಿರ ರೂ. ಚೀಟಿಯಲ್ಲಿ ಪ್ರತೀ ತಿಂಗಳು 2 ಸಾವಿರ ಕಟ್ಟುತ್ತಿದ್ದೆ. 5 ನೇ ತಾರೀಖಿನಂದು ಸದರಿ ಚೀಟಿ ನಡೆಯುತ್ತಿತ್ತು. 1,03,000/- 1 ನೇ ತಾರೀಖು ನಡೆಯುತ್ತಿತ್ತು. ಸದರಿ ಚೀಟಿಯಲ್ಲಿ 3 ಸಾವಿರ ರೂ. ಹಣ ಕಟ್ಟುತ್ತಿದ್ದೆ. ನಂತರ 15 ನೇ ತಾರೀಖಿನಂದು 1 ಲಕ್ಷದ ಎರಡು ಚೀಟಿಗಳು ನಡೆಯುತ್ತಿದ್ದು, ಅಲ್ಲಿ 6,000/- ರೂ. ಹಣ ಕಟ್ಟುತ್ತಿದ್ದೆ. 20 ನೇ ತಾರೀಖಿನಂದು 1,02,000/- ಚೀಟಿಯಲ್ಲಿ 3 ಸಾವಿರ ರೂ. ಹಣ ಕಟ್ಟುತ್ತಿದ್ದೆ. ಸದರಿ ಹಣವನ್ನು ಆರೋಪಿ, ಆಕೆಯ ಮಗ ವರುಣ, ಮಗಳು ಛಾಯಾ, ಅವರ ಸಂಬಂಧಿ ಶ್ಯಾಂ ಎಂಬುವವರು ಹಣ ಪಡೆಯುತ್ತಿದ್ದರು. ಹಣ ಸ್ವೀಕರಿಸಿದ ಬಗ್ಗೆ ನನ್ನ ಬಳಿ ಒಂದು ಡೈರಿಯಲ್ಲಿ ಸಹಿ ಮಾಡಿ ಪಡೆದುಕೊಳ್ಳುತ್ತಿದ್ದರು.

ನಾನು ಸದರಿ ಚೀಟಿಗಳನ್ನು ಸುಮಾರು 2015 ರ ಜುಲೈ ರವರೆಗೂ ಕಟ್ಟಿದ್ದೇನೆ. ಸದರಿ ಚೀಟಿಗಳ ಹಣವನ್ನು ನಾನು ಆ ನಂತರ ಕೊಡಲು ಅವರ ಬಳಿ ಕೇಳಿದ್ದೇನೆ. ಅವರು ಕೊಡುತ್ತೇನೆ, ಕೊಡುತ್ತೇನೆಂದು ಹೇಳುತ್ತಿದ್ದರು. ಆ ನಂತರ ನಾನು ಕೊಡುವುದಿಲ್ಲ, ನೀನು ಏನು ಮಾಡುತ್ತೀಯಾ ಎಂದು ಹೇಳಿರುತಾರೆ. ಒಟ್ಟಾರೆ ಆರೋಪಿ ನನಗೆ 3,55,000/- ರೂ. ಕೊಡಲು ಬಾಕಿ ಇರುತ್ತದೆ. ಅವರು ಎಷ್ಟೇ ಕೇಳಿದರು ಹಣ ನೀಡದ ಕಾರಣ ದೂರು ನೀಡಿದ್ದೇನೆ.

ದೂರನ್ನು ನೋಡುತ್ತಿದ್ದೇನೆ. ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸುತ್ತಿರುವ ಮಹಜರಿನಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ-5 ಎಂದು ಗುರುತಿಸಲಾಯ್ತು. ಈಗ ನನಗೆ ತೋರಿಸುತ್ತಿರುವ ಅಮಾನತ್ತು ಮಹಜರಿನಲ್ಲಿ ನನ್ನ ಸಹಿ ಇದೆ. ಡೈರಿ ಹಾಗೂ ಪುಸ್ತಕ ಅಮಾನತ್ತುಪಡಿಸಿಕೊಂಡ ಬಗ್ಗೆ ಬರೆಯಲಾಗಿದೆ. ಅದನ್ನು ನೋಡುತ್ತಿದ್ದೇನೆ. ಅದನ್ನು ನಿಪಿ-6 ಎಂದು, ಸಹಿಯನ್ನು ನಿಪಿ-6(ಎ) ಗುರುತಿಸಲಾಯ್ತು. ನನಗೆ ಆರೋಪಿ ಆ ರೀತಿ ಚೀಟಿ ಹಾಕಿಸಿಕೊಂಡು ಹಣ ಕೊಡದೇ ಮೋಸ ಮಾಡಿರುವ ವಿಚಾರ ಆ ನಂತರ ಗೊತ್ತಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯೇ ನನಗೆ ಮೋಸ ಮಾಡಿದ ವ್ಯಕ್ತಿಯಾಗಿದ್ದಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರವರಿಂದಃ-</u>

ನಿಪಿ**1** ನ್ನು ನಾನು ಓದದೇ ಕೊಟ್ಟಿದ್ದೇನೆಂದರೆ ರಿಯಲ್ಲ**.** ಅದನ್ನು ನಾನು ವಕೀಲರ ಕಡೆಯಿಂದ ತಯಾರು ಮಾಡಿಸಿದ್ದೇನೆ**.** ನಾನು ಹೇಳಿದ್ದರಿಂದ ಅವರು ತಯಾರಿಸಿದ್ದಾರೆ**.** ನನಗೆ **42,600/-** ರೂ**.** ಸಂಬಳ ಬರುತ್ತಿತ್ತು**.** ಆರೋಪಿ ಲ್ಯಾಬ್ ಮಾಡುತ್ತಿದ್ದರು**.** ಆವಾಗಿನಿಂದ ಪರಿಚಯ ಇರುತ್ತಾರೆ**.** ನಾವು ರೋಗಿಗಳನ್ನು ಅವರ ಲ್ಯಾಬಿಗೆ ಕಳುಹಿಸುತ್ತಿದ್ದವೆಂದರೆ ಸರಿಯಲ್ಲ**. 50** ಸಾವಿರ ರೂ**.** ಚೀಟಿಯಲ್ಲಿ ಎಷ್ಟು ಜನ ಸದಸ್ಯರಿದ್ದರೆಂದು ನನಗೆ ನೆನಪಿಲ್ಲ**.** ಸಾಕ್ಷಿ ಅವರು ನಂಬಿಸಿದ್ದರಿಂದ ಚೀಟಿ ಹಾಕಿದ್ದೆ ಅನ್ನುತ್ತಾರೆ**. 1** ನೇ ತಾರೀಖಿಂದು ನಡೆಯುತ್ತಿದ್ದ ಚೀಟಿಯಲ್ಲಿ ಎಷ್ಟು ಜನ ಇದ್ದರೆಂದು ನನಗೆ ಗೊತ್ತಿಲ್ಲ**.** ನಾನು **3** ಸಾವಿರ ಕಟ್ಟುತ್ತಿದ್ದು**,** ಬೇರೆಯವರು ಎಷ್ಟು ಜನ ಇದ್ದರೆಂದು ಗೊತ್ತಿಲ್ಲ**. 15** ನೇ ತಾರೀಖಿನಂದು ನಾನು **2** ಚೀಟಿಗಳಿಂದ **6,000/-** ರೂ**.** ಕಟ್ಟುತ್ತಿದ್ದ**.** ಆರೋಪಿ ಹೇಳಿದ ಪ್ರಕಾರ **1** ಚೀಟಿಯಲ್ಲಿ **35** ಜನ ಇದ್ದರು**.** ಬೇರೆ ಸದಸ್ಯರ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿದಾರರು ಆರೋಪಿ ನೀಡಿದ ನಂಬಿಕೆ ಮೇರೆಗೆ ನಾನು ಚೀಟಿ ಕಟ್ಟಿದ್ದೇನೆನ್ನುತ್ತಾರೆ**.** ನಾನು ಯಾವತ್ತೂ ಕೂಡಾ ಚೀಟಿಯನ್ನು ಎತ್ತಿರಲಿಲ್ಲ**.** ಆರೋಪಿ ಚೀಟಿಯಾದ ನಂತರ ನನಗೆ ದುಡ್ಡು ಕೊಡುತ್ತೇನೆಂದು ಹೇಳಿದ್ದರು**.** ಆರೋಪಿಗೆ ಲ್ಯಾಬ್ ಚೆನ್ನಾಗಿ ನಡೆಯುತ್ತಿತ್ತು ಎಂದರೆ ಸರಿ**.** ಆರೋಪಿಗೆ ಚೀಟಿ ವ್ಯವಹಾರ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ**.** ಆ ರೀತಿ ಜೀವನ ಮಾಡುವ ಅವಶ್ಯಕತೆ ಇರಲಿಲ್ಲವೆಂದರೆ ಸರಿಯಲ್ಲ**.** ಸಾಕ್ಷಿ ಅವರು ಹೇಳಿದ್ದನ್ನು ನಾನು ಕೇಳಿದ್ದೇನೆನ್ನುತ್ತಾರೆ**.**

ನಾನು ತರೀಕೆರೆಯಲ್ಲಿ ನಾನು ಚೀಟಿಗಳನ್ನು ಹಾಕಿದ್ದೇನೆ ಮತ್ತು ಎತ್ತಿದ್ದೇನೆ**.** ಸಾಕ್ಷಿ ಮುಂದುವರೆದು ಆಕೆ ಹೆಣ್ಣು ಮಗಳಾಗಿದ್ದರಿಂದ ಮೋಸ ಮಾಡುವುದಿಲ್ಲವೆಂಬ ನಂಬಿಕೆ ಮೇರೆಗೆ ನಾನು ಚೀಟಿ ಹಾಕಿದ್ದೇನೆನ್ನುತ್ತಾರೆ**.** ನನ್ನ ಮಗಳು ಇಂಜಿನಿಯರಿಂಗ್ ಓದುತ್ತಿದ್ದಾಳೆಂದರೆ ಸರಿ**.** ನನ್ನ ಮಗಳು ನನ್ನ ತಂಗಿಯ ಮನೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾಳೆ**.** ನಾನು **2011** ರ ಅವಧಿಯಲ್ಲಿ ಒಬ್ಬಳೇ ಇದ್ದೆ**.** ನಾನು ಇಂದಿರಾಬಾಯಿಯಿಂದ **2** ಲಕ್ಷ ಸಾಲ ಮಾಡಿದ್ದೆ ಎಂದರೆ

ಸರಿಯಲ್ಲ. ಡೈರಿಯನ್ನು ನೀವು ನ್ಯಾಯಾಲಯಕ್ಕೆ ಕೊಟ್ಟಿಲ್ಲವೆಂದರೆ ಸಾಕ್ಷಿದಾರರು ಪೋಲೀಸರಿಗೆ ಕೊಟ್ಟಿದ್ದೇನೆನ್ನುತ್ತಾರೆ. ನಾನು ಪೋಲೀಸರಿಗೆ ಕೊಟ್ಟಿಲ್ಲವೆಂದರೆ ಸರಿಯಲ್ಲ. ಆರೋಪಿ ಹಣ ವಾಪಾಸ್ಸು ಕೇಳಿದ್ದರಿಂದ ನಾನು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಆರೋಪಿ ಯಾವುದೇ ಚೀಟಿ ನಡೆಸುತ್ತಿರಲಿಲ್ಲವೆಂದರೆ ಸರಿಯಲ್ಲ, ನಾನು ಯಾವುದೇ ಚೀಟಿ ಹಾಕಿಲ್ಲವೆಂದರೆ ಸರಿಯಲ್ಲ. ಆರೋಪಿಗೆ ವಂಚನೆ ಮಾಡುವ ಉದ್ದೇಶದಿಂದ ಹಣ ಕೊಡದೇ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ನನಗೆ ಸುಳ್ಳು ಸಾಕ್ಷಿ ಕೊಡುವ ಅವಶ್ಯಕತೆ ಇಲ್ಲ ಅನ್ನುತ್ತಾರೆ. ನನಗೆ ಹುಷಾರಿಲ್ಲದ ಕಾರಣ ನಾನು ನ್ಯಾಯಾಲಯದಿಂದ ಸಮನ್ಸ್ ನೀಡಿದ ತಕ್ಷಣ ಬರಲು ಸಾಧ್ಯವಾಗಲಿಲ್ಲ. ನಾನು ತಪ್ಪಿಸಿಕೊಂಡು ಓಡಾಡುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಆಕೆಯನ್ನು ದೇವರು ನೋಡಿಕೊಳ್ಳುತ್ತಾರೆನ್ನುತ್ತಾರೆ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಎ ಒ

**Sd/-**
(ಎಂ.ಸಿ. ನಂಜೇಗೌಡ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.